ದಶಮಾಂಶ, ಭಿನ್ನರಾಶಿ ಯಾವುದೇ ಗಣಿತ ಕ್ರಿಯೆಯನ್ನು ಕೇಳಿ! ಈ ಶಾಲೆಯ ಮಕ್ಕಳಿಗೆ ಎಲ್ಲವೂ ಗೊತ್ತು

ಅಶೋಕ್ ಕುಮಾರ್ ಸೊಹೇಲ್, ಕೈಲಾಶ್‌ಚಂದ್ ಜಾಟ್

ಸರ್ಕಾರಿ ಪ್ರಾಥಮಿಕ ಶಾಲೆ, ನದ್ಯಾ–ಕಿ–ಧಾನಿ
ಉಣಿಯಾರಾ ಬ್ಲಾಕ್, ಟೋಂಕ್ ಜಿಲ್ಲೆ, ರಾಜಸ್ಥಾನ

ನದ್ಯಾ–ಕಿ–ಧಾನಿಯನ್ನು ತಲಪಲು ನಮಗೆ ನಾವು ಅಂದುಕೊಂಡದ್ದಕ್ಕಿಂತ ಹೆಚ್ಚು ಸಮಯ ತಗುಲಿತು. ದೇವಾಲಿಯಿಂದ ವಾಹನದಲ್ಲಿ ಹೊರಟು ಟೋಂಕ್ ಅನ್ನು ಬಳಸಿ

ಕೊಂಡು ಹೋಗುತ್ತಿದ್ದರೆ ನಮಗೆ ಕಂಡದ್ದು ಮೈಲುಗಟ್ಟಲೆ ದೂರ ಆಗಷ್ಟೇ ಬಿತ್ತಿದ ಸಾಸಿವೆ ಹೊಲಗಳು. ಆಗಲೇ ಮೂರು ಘಂಟೆಯಾಗಿತ್ತು. ಇನ್ನೊಂದು ತಾಸಿನಲ್ಲಿ ಶಾಲೆಯು ಮುಚ್ಚಬಹುದು. ನಾವು ಎಷ್ಟನ್ನು ನೋಡಬಹುದು, ಎಷ್ಟು ಅರ್ಥಮಾಡಿಕೊಳ್ಳಬಹುದು? ದುರದೃಷ್ಟವಶಾತ್ ಇದೊಂದು ನಿಷ್ಫಲ ಭೇಟಿಯಾದೀತೇ? ಇಂತಹ ಆತಂಕಗಳೊಂದಿಗೆ ಕೆಸರು ತುಂಬಿದ ಹಳ್ಳಿ ರಸ್ತೆಯಲ್ಲಿ, ಎಮ್ಮೆಗಳ ನಡುವೆ ದಾರಿ ಮಾಡಿಕೊಂಡು ಶಾಲೆಯ ಗೇಟ್ ತಲಪಿದೆವು. ಶಾಲೆಯ ಹೊರಗಡೆ ಒಂದು ದನದ ಕೊಟ್ಟಿಗೆ ಇತ್ತು. ಅದರ ಇರವು ಕಣ್ಣಿಗೂ, ಮೂಗಿಗೂ ರಾಚುವಂತಿತ್ತು. ಇದೆಲ್ಲ ಶುಭಸೂಚನೆಯೇನೂ ಆಗಿರಲಿಲ್ಲ. ಆದರೆ ನಾವು ಒಳಗೆ ಹೋಗುತ್ತಿದ್ದಂತೆಯೇ ಒಂದು ಶುಚಿಯಾದ ಆವರಣವನ್ನು, ಎಡಗಡೆಯಲ್ಲಿ ಚೆನ್ನಾಗಿ ನಿರ್ವಹಣೆಯಲ್ಲಿರುವ ಆಟದ ಮೈದಾನವೊಂದನ್ನು ಕಂಡೆವು. ಬಲಗಡೆಯಲ್ಲಿ ಅನೇಕ ಮರಗಳ ಗುಂಪಿದ್ದು, ದಾರಿಯ ಎರಡೂ ಬದಿ ಬೇವಿನ ಮರಗಳ ಸಾಲು ಶಾಲೆಯವರೆಗೂ ಇದ್ದವು. ನಾವು ವೆರಾಂಡದ ಮೆಟ್ಟಿಲನ್ನು ಹತ್ತುತ್ತಿದ್ದಂತೆ ಮಕ್ಕಳ ಉತ್ಸಾಹದ ಗುಜು ಗುಜು ಕೇಳಿ ಬಂತು. ನಾನು ಮತ್ತು ನನ್ನ ಸಹೋದ್ಯೋಗಿ ರಾಕೇಶ್ ಬಲಕ್ಕೆ ತಿರುಗಿ ಮೂರು, ನಾಲ್ಕು ಹಾಗೂ ಐದನೇ ತರಗತಿಗಳಿಗೆ ಅಶೋಕ್ ಕುಮಾರ್ ಸೊಹೇಲ್‌ರವರು ಗಣಿತ ಹೇಳಿಕೊಡುತ್ತಿರುವ ಕಡೆಗೆ ಸಾಗಿದೆವು. ನಮ್ಮ ಇನ್ನೊಬ್ಬ ಸಹೋದ್ಯೋಗಿ ದೀಪ್ ಚಂದ್‌ರವರು ಎಡಕ್ಕೆ ತಿರುಗಿ ಒಂದು ಮತ್ತು ಎರಡನೇ ತರಗತಿಗೆ ಕೈಲಾಶ್ ಚಂದ್ ಜಾಟ್‌ರು ಹಿಂದಿ ಹೇಳಿಕೊಡುತ್ತಿದ್ದಲ್ಲಿಗೆ ನಡೆದರು.

ಅಶೋಕ್‌ರವರ ತರಗತಿಯಲ್ಲಿ ಇಪ್ಪತ್ತಮೂರು ವಿದ್ಯಾರ್ಥಿಗಳಿದ್ದರು. ನಾನು ಮತ್ತು ರಾಕೇಶ್ ತರಗತಿಗೆ ತೊಂದರೆ ಆಗದಂತೆ ಅಲ್ಲಿದ್ದ ಚಿಕ್ಕ ಸ್ಥಳಾವಕಾಶದಲ್ಲಿ ಸೇರಿಕೊಂಡೆವು. ಸಾಮಾನ್ಯವಾಗಿ ಯಾವುದೇ ಶಾಲೆಗೆ ಸಂದರ್ಶಕರು ಹೋದಾಗ, ಮಕ್ಕಳೆಲ್ಲಾ ಎದ್ದು ನಿಂತು ಚೆನ್ನಾಗಿ ಅಭ್ಯಾಸ ಮಾಡಿದ ಮಾದರಿಯಲ್ಲಿ "ಗುಡ್‌ಮಾರ್ನಿಂಗ್/ಗುಡ್ ಆಫ್ಟರ್‌ನೂನ್ ಸರ್", "ಹೇಗಿದ್ದೀರಿ ಸರ್" ಎಂದು ಒಟ್ಟಿಗೇ ಕೇಳುತ್ತವೆ. ಆದರೆ ಇಲ್ಲಿ ಹಾಗಾಗಲಿಲ್ಲ. ಶಿಕ್ಷಕರು ತಮ್ಮತ್ತ ಎಸೆಯುತ್ತಿದ್ದ ಗಣಿತದ ಸಮಸ್ಯೆಗಳನ್ನು ಉತ್ತರಿಸುವುದರಲ್ಲಿ ಮಕ್ಕಳು ಸಂಪೂರ್ಣವಾಗಿ ಮುಳುಗಿ ಹೋಗಿದ್ದರು. ನಮ್ಮನ್ನು ನಿರೀಕ್ಷಿಸುತ್ತಿದ್ದ ಅಶೋಕ್ ನಮ್ಮತ್ತ ಮುಗುಳ್ನಗೆ ಬೀರಿದರು. ಮಕ್ಕಳು ಸಹ ನಮ್ಮತ್ತ ತಿರುಗಿ ಒಮ್ಮೆ ಮುಗುಳ್ನಕ್ಕು ತಮ್ಮ ಪಾಠವನ್ನು ಮುಂದುವರೆಸಿದರು. ನಮಗೆ ಮುಂದಿನ ಮೂವತ್ತೈದು ನಿಮಿಷಗಳು ಹಬ್ಬದಂತಿತ್ತು. ಎರಡು ಅಂಕಿಗಳೊಂದಿಗೆ ಹಲವಾರು ಗಣಿತ ಕ್ರಿಯೆಗಳನ್ನು, ಮನಸ್ಸಿನಲ್ಲಿಯೇ ಬಿಡಿಸಬೇಕಾದ ಅನೇಕ ಸಮಸ್ಯೆಗಳನ್ನು ಅಶೋಕ್ ಮಕ್ಕಳಿಗೆ ಸವಾಲಾಗಿ ನೀಡುತ್ತಿದ್ದರು. ಅವರು ಒಂದು ಮಾರುಕಟ್ಟೆಯ ಸಂದರ್ಭವನ್ನು ಸೃಷ್ಟಿಸಿದ್ದರು. ಕಾಲ್ಪನಿಕವಾಗಿ ಅವರು ಮಕ್ಕಳನ್ನು ಅನೇಕ ಸ್ಟೇಷನರಿಗಳನ್ನು ಕೊಳ್ಳಲು ಕಳಿಸಿದರು. ಅಲ್ಲೊಂದು ಹಲಗೆಯ ಮೇಲೆ ವಿವಿಧ ವಸ್ತುಗಳ ಬೆಲೆಯನ್ನು ನಮೂದಿಸಲಾಗಿತ್ತು. ಕ್ವಿಜ್ ಮಾಸ್ಟರ್‌ನಂತೆ ಅಶೋಕ್ ಪ್ರಶ್ನೆಗಳನ್ನು ಕೇಳುತ್ತಾ ಹೋದರು: "ನೀವು ಮೂರು ಪೆನ್ಸಿಲ್ ಮತ್ತು ನಾಲ್ಕು ಅಳಿಸುವ ರಬ್ಬರ್‌ಗಳನ್ನು ಕೊಂಡರೆ ಅದಕ್ಕೆ ಎಷ್ಟು ಖರ್ಚು ಮಾಡಿದ

ಹಾಗಾಯಿತು? ನೀವು ಸುಮಾರು 90 ರೂಪಾಯಿ ಖರ್ಚು ಮಾಡಿದ್ದರೆ ಏನೆಲ್ಲಾ ಸಾಮಾನು ಕೊಂಡಿರಬಹುದು? ನೀವು ನೂರು ರೂಪಾಯಿ ತೆತ್ತು ಈ ಮೂರು ಪದಾರ್ಥಗಳನ್ನು ಇಂತಿಂಥ ಪರಿಮಾಣದಲ್ಲಿ ಕೊಂಡಿದ್ದರೆ ನಿಮಗೆ ಸಿಗುವ ಬಾಕಿ ಹಣ ಎಷ್ಟು?" ಕೋಣೆಯಲ್ಲಿದ್ದ ಮಕ್ಕಳೆಲ್ಲರೂ ಉತ್ತರಿಸುತ್ತಿದ್ದರು; ಕೆಲವು ಪ್ರಶ್ನೆಗಳಿಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿರುತ್ತಿದ್ದವು; ಕೆಲವು ಮಕ್ಕಳು ತಪ್ಪು ಮಾಡುತ್ತಿದ್ದರು ನಿಜ, ಆದರೆ ಮಕ್ಕಳು ಮನಸ್ಸಿನಲ್ಲಿಯೇ ವೇಗವಾಗಿ ಲೆಕ್ಕ ಹಾಕುತ್ತಿದ್ದರು, ಅವರಿಗೆ ಪ್ರಶ್ನೆಯ ಅರ್ಥ ಮತ್ತು ಗಣಿತ ಕ್ರಿಯೆ ಸ್ಪಷ್ಟವಾಗಿ ತಿಳಿದಿದೆ ಎಂಬುದು ಅವರ ಉತ್ತರಗಳಿಂದ ಸ್ಪಷ್ಟವಾಗುತ್ತಿತ್ತು.

ಅಶೋಕ್ ಆಗಾಗ ನಮ್ಮ ಕಡೆ ನೋಡಿ ಮುಗುಳ್ನಗುತ್ತಿದ್ದರು. ಹೆಮ್ಮೆಯನ್ನೂ ಸಂತಸವನ್ನೂ ನಾನು ಆ ನಗುವಿನಲ್ಲಿ ಕಂಡೆ. ಅವರು ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಆವಶ್ಯಕ ಸಾಮಗ್ರಿಗಳನ್ನು ಕೊಳ್ಳಲು ಅಂಗಡಿಗೆ ಕಳಿಸುವ ಕಾಲ್ಪನಿಕ ಸಂದರ್ಭವನ್ನು ಸೃಷ್ಟಿಮಾಡಿದರು. ಅದರಲ್ಲಿ ಇನ್ನೂ ದೊಡ್ಡ ಸಂಖ್ಯೆಗಳು ಲೆಕ್ಕದಲ್ಲಿ ಬಂದವು. ಸಿಮೆಂಟ್, ಉಕ್ಕು ಮತ್ತು ಇಟ್ಟಿಗೆಗಳನ್ನು ತರಬೇಕಿತ್ತು. ನಾನು ಯಾವ ಮಗು ಹೇಗೆ ಉತ್ತರ ಹೇಳುತ್ತದೆ ಎಂಬುದನ್ನು ಗಮನಿಸುತ್ತಿದ್ದೆ. ನಾಲ್ವರು ಹುಡುಗರು ಮಿಂಚಿನ ವೇಗದಲ್ಲಿ ಉತ್ತರ ಹೇಳುತ್ತಿದ್ದರು. ಆದರೆ ಇಪ್ಪತ್ತಮೂರು ವಿದ್ಯಾರ್ಥಿಗಳಲ್ಲಿ ಹದಿನೇಳು ಹುಡುಗರು ಒಂದಲ್ಲ ಒಂದು ಪ್ರಶ್ನೆಗೆ ಉತ್ತರಿಸಿದರು. ಮೇಷ್ಟರು ಲೆಕ್ಕ ಪಾಠದ ಪ್ರಶ್ನೆ ಕೇಳುತ್ತಿಲ್ಲ, ಬದಲಾಗಿ ದೀಪಾವಳಿ ಹಬ್ಬದ ಸಿಹಿ ಹಂಚುತ್ತಿದ್ದಾರೆ ಎಂದು ನೋಡಿದವರು ಅಂದುಕೊಳ್ಳಬೇಕು, ಮಕ್ಕಳ ಮುಖದಲ್ಲಿ ಅಂತಹ ಪ್ರತೀಕ್ಷೆಯ ಮಂದಹಾಸವಿತ್ತು. ಶಾಲೆ ಮುಚ್ಚುವ ಸಮಯವಾಗಿದ್ದರೂ ಆ ಕಡೆ ಯಾರಿಗೂ ಗಮನವಿರಲಿಲ್ಲ. ಅಶೋಕ್ ಈಗ ಮಕ್ಕಳಿಗೆ ದಶಮಾಂಶ ಪದ್ಧತಿಯ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಪ್ರಯಾಸ ಪಡುವ ಎರಡು ಪರಿಕಲ್ಪನೆಗಳೆಂದರೆ "ಭಿನ್ನರಾಶಿ" ಮತ್ತು "ದಶಮಾಂಶ". ಆದರೆ ಮಕ್ಕಳಿಗೆ ಸಂಖ್ಯೆಗಳ ಬಗ್ಗೆ ಸರಿಯಾದ ಗ್ರಹಿಕೆ ಇದ್ದಾಗ, ಅವುಗಳ ರಚನೆ ಮತ್ತು ಮೂಲಭೂತ ಗಣಿತ ಕ್ರಿಯೆಗಳ ಅರಿವು ಇದ್ದಾಗ ಈ ಪ್ರಕ್ರಿಯೆಗಳನ್ನು ಕಟ್ಟಿಕೊಡುವುದು ಸುಲಭ. ಅಶೋಕ್‌ರವರು ಮಕ್ಕಳಿಗೆ ನೂರು ರೂಪಾಯಿಯನ್ನು ಯಾವುದೆಲ್ಲಾ ರೂಪಾಯಿ ನೋಟುಗಳಿಂದ ಒಟ್ಟುಮಾಡಬಹುದು ಎಂದು ಕೇಳಿದರು. ಮಕ್ಕಳು ಒಂದೇ ದನಿಯಲ್ಲಿ ಮೊದಲಿಗೆ ಎರಡು ಐವತ್ತು ರೂಪಾಯಿ ನೋಟುಗಳನ್ನು ಸೇರಿಸಿ ಮಾಡಬಹುದು ಎಂದವರು ಆಮೇಲೆ ಇಪ್ಪತ್ತು ರೂಪಾಯಿಗಳಿಂದ, ಹತ್ತು ರೂಪಾಯಿಗಳಿಂದ... ಹೀಗೆ ಬೇರೆ ಬೇರೆ ಮೌಲ್ಯದ ನೋಟುಗಳಿಂದ ಕಡೆಗೆ ಎರಡು ಮತ್ತು ಒಂದು ರೂಪಾಯಿಯನ್ನು ಸಹ ಉಪಯೋಗಿಸಿ ನೂರು ರೂ ಮಾಡಿದರು. ಉತ್ಸಾಹದಿಂದ ನಡೆಯುತ್ತಿದ್ದ ಈ ಚರ್ಚೆಯ ಒಂದು ಘಟ್ಟದಲ್ಲಿ ಅಶೋಕ್‌ರವರು, ಅಂಗಡಿಯವನಿಗೆ ಒಂದು ಸಮಸ್ಯೆಯಿದೆ ಎಂದು ಹೇಳಿ ಚರ್ಚೆಯನ್ನು ನಿಲ್ಲಿಸಿದರು. ಅಂಗಡಿಯವನ ಬಳಿ ಇರುವ ನೋಟುಗಳನ್ನೆಲ್ಲಾ ಸೇರಿಸಿದರೆ ತೊಂಬತ್ತೊಂಬತ್ತು ರೂಪಾಯಿಗಳಿವೆ,

ಉಳಿದದ್ದು ರೂಪಾಯಿಗಿಂತ ಕಡಿಮೆ ಬೆಲೆಯ ನಾಣ್ಯಗಳಲ್ಲಿವೆ ಎಂದರು. ಈಗ ಮಕ್ಕಳು ಐವತ್ತು ಪೈಸೆ, ಇಪ್ಪತ್ತೈದು ಪೈಸೆ, ಹತ್ತು ಪೈಸೆ ಮೊದಲಾದ ನಾಣ್ಯಗಳಿಂದ ರೂಪಾಯಿಯನ್ನು ಲೆಕ್ಕಹಾಕಿದರು. ಈಗ ಭಿನ್ನರಾಶಿ ಮತ್ತು ದಶಮಾಂಶವನ್ನು ಮಕ್ಕಳಿಗೆ ಪರಿಚಯಿಸಲು ಅಶೋಕ್ ಅವರಿಗೆ ಸೂಕ್ತ ಸಂದರ್ಭ ಒದಗಿ ಬಂತು. ಐವತ್ತು ಪೈಸೆ ಎಂದರೆ ಅರ್ಧ ರೂಪಾಯಿ ಅಥವಾ 0.5 ರೂಪಾಯಿ ಎಂದು ವಿವರಿಸಿದರು. ಮಕ್ಕಳು ಈಗ ನೂರನ್ನು 99+0.5+0.25+0.25 ಎಂದು ಬರೆದರು. ಇವತ್ತಿಗೆ ಇಷ್ಟು ಸಾಕು ಎಂದು ಅಶೋಕ್ ನಿರ್ಧರಿಸುವ ವೇಳೆಗಾಗಲೇ ಮಕ್ಕಳು ಎರಡು ರೂಪಾಯಿಗೆ, ಮೂರು ರೂಪಾಯಿಗೆ ಭಿನ್ನರಾಶಿ ಮತ್ತು ದಶಮಾಂಶವನ್ನು ರಚಿಸುತ್ತಾ ವೇಗವಾಗಿ ಮುಂದುವರಿಯುತ್ತಿದ್ದರು.

ನಮಗೆ ಮಕ್ಕಳ ಜೊತೆ ಮಾತನಾಡಲು ಕೊಂಚ ಸಮಯ ಸಿಕ್ಕಿದಾಗ ನನ್ನ ಸಹೋದ್ಯೋಗಿ ರಾಕೇಶ್ ತಾವು ಜೈಪುರ್‌ನಿಂದಲೂ, ನಾನು ಬೆಂಗಳೂರಿನಿಂದಲೂ ಬಂದಿದ್ದೇವೆ ಎಂದು ಹೇಳಿದರು. ನದ್ಯಾ–ಕಿ–ಧಾನಿ ಹಳ್ಳಿಯಿಂದ ಈ ಎರಡು ಮಹಾನಗರಗಳು ಎಷ್ಟು ದೂರದಲ್ಲಿವೆ ಎಂದು ನಾವು ಲೆಕ್ಕ ಹಾಕಿದೆವು. ಅಲ್ಲಿಂದಾಚೆಗೆ ನಾವು ಇಲ್ಲಿಗೆ ತಲುಪಲು ಸಾಪೇಕ್ಷವಾಗಿ ಎಷ್ಟು ಸಮಯ ತೆಗೆದುಕೊಂಡಿತು ಎಂಬ ಲೆಕ್ಕಾಚಾರ ಶುರುವಾಯಿತು. ಆಗ ಮಕ್ಕಳು ರಸ್ತೆಯಲ್ಲಿ ಪ್ರಯಾಣ ಮಾಡಿದರೆ ಬೆಂಗಳೂರಿನಿಂದ ನದ್ಯಾ–ಕಿ–ಧಾನಿಗೆ ಎಷ್ಟು ಸಮಯ ತೆಗೆದುಕೊಳ್ಳಬಹುದು ಎಂಬ ಅಂದಾಜನ್ನು ಕರಾರುವಾಕ್ಕಾಗಿ ಮಾಡಿದರು.

ನಮಗೆ ಕೈಲಾಶ್ ಚಂದ್‌ರೊಂದಿಗೆ ಕಳೆಯಲು ಸಾಧ್ಯವಾದದ್ದು ಬಹಳ ಕಡಿಮೆ ಸಮಯ. ಆದರೆ ಕಿರಿಯ ತರಗತಿಯ ಮಕ್ಕಳು ಇವರೊಂದಿಗೆ ಹೊಂದಿದ್ದ ಸ್ನೇಹಭಾವವು ಅಶೋಕ್‌ರವರ ತರಗತಿಯಂತೆಯೇ ಇತ್ತು– ಮಕ್ಕಳಿಗೆ ಅದೇ ಸ್ವತಂತ್ರ, ನಿರ್ಬಂಧ ರಹಿತ ವಾತಾವರಣ ಮತ್ತು ಎಲ್ಲವನ್ನೂ ಉತ್ತರಿಸುವ ತವಕ. ಆರು–ಏಳರ ವಯಸ್ಸಿನಲ್ಲಿ ಸಹಜವಾಗಿರುವಂತೆ ಅವರ ಏಕಾಗ್ರತೆ ಸುಲಭವಾಗಿ ಬದಲಾಗುತ್ತಿತ್ತು. ಕೈಲಾಶ್ ಚಂದ್ 'ತರಕಾರಿ' ಎಂಬ ವಿಷಯವನ್ನು ಅವರಿಗೆ ಆಸಕ್ತಿದಾಯಕವಾಗುವಂತೆ ಮಾಡುತ್ತಿದ್ದರು. ಒಂದನೆಯ ತರಗತಿಯ ಮಕ್ಕಳಿಗೆ 'ಟೊಮ್ಯಾಟೊ' ಎಂಬ ಪದವನ್ನು ಹೇಳಿಕೊಟ್ಟರೆ, ಎರಡನೆಯ ತರಗತಿಯವರಿಗೆ ಅದೇ ಟೊಮ್ಯಾಟೊ ಪದವನ್ನು ಉಪಯೋಗಿಸಿ ಸರಳವಾದ ವಾಕ್ಯಗಳನ್ನು ರಚಿಸಲು ಹೇಳಿದರು. ಸಂಜೆ ಮಾಡಲು ಸ್ವಲ್ಪ ಹೋಂ ವರ್ಕ್ ಕೊಟ್ಟರು, ಪೋಷಕರನ್ನು, ಅಕ್ಕ–ಅಣ್ಣರನ್ನು ಕೇಳಿ ಟೊಮ್ಯಾಟೊದಿಂದ ಏನೆಲ್ಲಾ ಅಡಿಗೆ ಮಾಡಬಹುದೆಂಬುದನ್ನು ತಿಳಿದುಬರಲು ಹೇಳಿದರು. ಒಂದು ಮಗು ಕೂಡಲೇ, "ನಾವು ಜ್ಯೂಸ್ ಮಾಡುತ್ತೇವೆ" ಎಂದು ಹೇಳಿತು. ಕೈಲಾಶ್ ನಗುತ್ತಾ "ಇನ್ನೂ ಏನೇನು ಮಾಡಬಹುದೆಂದು ಮನೆಯಲ್ಲಿ ಕೇಳಿಕೊಂಡು ಬಾ" ಎಂದರು.

ನಾವು ಅಂಗಳಕ್ಕೆ ಬಂದಾಗ ಮಕ್ಕಳು ಮನೆಗೆ ಹೋದ ಮೇಲೆ ಕೈಲಾಶ್ ಹಾಗೂ ಅಶೋಕ್‌ರೊಂದಿಗೆ ಮಾತನಾಡಬಹುದು ಎಂಬುದು ನಮ್ಮ ಎಣಿಕೆಯಾಗಿತ್ತು. ಆದರೆ ಮಕ್ಕಳು ಹೋಗಲಿಕ್ಕೆ ಒಪ್ಪಲಿಲ್ಲ. "ನಾವು ಹೋಗುವವರೆಗೂ ಮಕ್ಕಳು ಹೋಗುವುದಿಲ್ಲ

ಸರ್, ಹೀಗಾಗಿ ನಾವು ಅವರ ಎದುರೇ ಮಾತನಾಡಬೇಕಾಗುತ್ತದೆ." ಎಂದರು ಅಶೋಕ್. ಮಕ್ಕಳು ನಮ್ಮ ಮೇಜನ್ನು ಸುತ್ತುವರೆದಿದ್ದರಿಂದ ನಾವು ಅವರೊಂದಿಗೆ ಹರಟೆ ಹೊಡೆಯಲು ನಿರ್ಧರಿಸಿದೆವು. ಮೇಜಿನ ಮೇಲಿದ್ದ ಲೋಹದ ಹೂಜಿಯಲ್ಲಿ ನೀರಿತ್ತು. ಇದು ಯಾವ ಲೋಹ ಎಂದು ನಾವು ಕೇಳಿದೆವು. ಸರಿಯೋ, ತಪ್ಪೋ ಆದರೆ ಮಕ್ಕಳು ಪಟಪಟನೆ ಉತ್ತರ ಹೇಳಿದರು. ಒಂದು ಮಗು ಸ್ಟೀಲ್ ಎಂದರೆ, ಇನ್ನೊಂದು ಹಿತ್ತಾಳೆ ಎಂದಿತು. ಕಡೆಗೆ ಅಶೋಕ್ ಅದು ತಾಮ್ರದ್ದೆಂದೂ ತಾಮ್ರದ ಪಾತ್ರೆಗಳಲ್ಲಿ ಊಟ ಮಾಡುವುದು, ಕುಡಿಯುವುದು ಒಳ್ಳೆಯದೆಂದೂ ಹೇಳಿದರು. ಅನಂತರ ನಾವು ಇದರಲ್ಲಿ ಎಷ್ಟು ನೀರು ಹಿಡಿಯಬಹುದು ಎಂದು ಕೇಳಿದೆವು. ತಕ್ಷಣವೇ ಕೆಲವರು ಅರ್ಧ ಲೀಟರ್ ಎಂದರೆ, ಇನ್ನು ಕೆಲವರು ಒಂದು ಲೀಟರ್ ಎಂದರು. ಆಮೇಲೆ ಎಲ್ಲರೂ ಅದು ಒಂದು ಲೀಟರ್ ಹೂಜಿ ಎಂಬ ತೀರ್ಮಾನಕ್ಕೆ ಬಂದರು. ಅನಂತರ ಅವರ ಮನೆಗಳಲ್ಲಿರುವ ಹಾಲು ಅಳೆಯುವ ಪಾತ್ರೆಯ ಗಾತ್ರದ ವಿಷಯ ಚರ್ಚೆಗೆ ಬಂತು. ಅಮೇಲೆ ನಮ್ಮ ಮುಂದಿದ್ದ ಮೇಜಿನ ಅಳತೆ ಏನು ಎಂದು ಕೇಳಿದೆವು. ಅಗಲ ಎಷ್ಟು ಎಂಬುದಕ್ಕೆ ಉತ್ತರ, ತಿದ್ದುಪಡಿಗಳ ನಂತರ ಎರಡು ಅಡಿ ಎಂದರು. ಇನ್ನು ಉದ್ದ? ಅದಂತೂ ಮೂರು ಅಡಿ ಎಂದು ಬೇಗನೇ ತೀರ್ಮಾನವಾಯಿತು. ಸುತ್ತಳತೆ ಎಷ್ಟು ಎನ್ನುವುದು ಇನ್ನಷ್ಟು ಲೆಕ್ಕಾಚಾರಕ್ಕೆ ದಾರಿಯಾಯಿತು. ಅಂಕಗಣಿತವನ್ನು ಕಲಿಯುವುದರಲ್ಲಿ ಬರೀ ಲೆಕ್ಕಾಚಾರವಲ್ಲ, ಆಡುವ ಭಾಷೆ ಮುಖ್ಯವಾಗಿರುತ್ತದೆ ಅಲ್ಲವೇ. ಹಿಂದಿಯಲ್ಲಿ ಇದನ್ನು 'ಪದ ಸಮಸ್ಯೆಗಳು' (ಇಬರ್ತಿ ಸವಾಲ್) ಎಂದು ಕರೆಯುತ್ತಾರೆ. ಇವುಗಳಲ್ಲಿ ಮಕ್ಕಳು ಯಾವ ಗಣಿತ ಪ್ರಕ್ರಿಯೆಯನ್ನು ಉಪಯೋಗಿಸಬೇಕು ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು, ಏನನ್ನು ಕೇಳುತ್ತಿದ್ದಾರೆ ಎಂದು ಗ್ರಹಿಸಿದಾಗ ಮಾತ್ರ. ಈ ಮಕ್ಕಳು ಹಾಡು ಹೇಳುವಷ್ಟು ಉಲ್ಲಾಸದಿಂದ ಪಟಪಟನೆ ಉತ್ತರಿಸುತ್ತಿದ್ದರು.

ಅಶೋಕ್ ಶಿಕ್ಷಣ ಇಲಾಖೆಯನ್ನು ಸೇರಿದ್ದು 2001ರಲ್ಲಿ. ನದ್ಯಾ-ಕಿ-ಧಾನಿಗೆ ಬಂದದ್ದು 2010ರಲ್ಲಿ. ಪದವೀಧರರಾಗಿದ್ದು, ಶಿಕ್ಷಕ ತರಬೇತಿಯಲ್ಲಿ ಡಿಪ್ಲೊಮಾ ಹೊಂದಿರುವ ಅಶೋಕ್ ಗಣಿತ ಮತ್ತು ಇಂಗ್ಲಿಷ್‌ಅನ್ನು ಕಲಿಸುತ್ತಾರೆ. ತನಗೆ ಇನ್ನೂ ಚೆನ್ನಾಗಿ ಇಂಗ್ಲಿಷ್ ಕಲಿಸಲು ಆಗುತ್ತಿದ್ದರೆ ಒಳ್ಳೆಯದಿತ್ತು ಎಂದು ಅವರು ಹುಳಿ ನಗೆಯೊಡನೆ ಹೇಳುತ್ತಾರೆ. ನಲವತ್ತೈದು ವರ್ಷ ವಯಸ್ಸಿನ ಅಶೋಕ್‌ಗೆ ಇಬ್ಬರು ಮಕ್ಕಳು. ಮಗಳು ಶಾಲೆ ಮುಗಿಸಿ ವೈದ್ಯಕೀಯ ಕೋರ್ಸ್‌ಗಾಗಿ ನೀಟ್ ಪ್ರವೇಶ ಪರೀಕ್ಷೆಯನ್ನು ಬರೆಯುತ್ತಿದ್ದಾಳೆ. ಮಗ ಹನ್ನೆರಡನೆಯ ತರಗತಿಯಲ್ಲಿ ಓದುತ್ತಿದ್ದಾನೆ.

ಐವತ್ತು ವರ್ಷ ವಯಸ್ಸಿನ ಕೈಲಾಶ್ ಚಂದ್ 1999ರಿಂದಲೇ ನದ್ಯಾ- ಕಿ- ಧಾನಿ ಶಾಲೆಯಲ್ಲಿ ಇದ್ದಾರೆ. ರಾಜೀವ್ ಗಾಂಧಿ ಪಾಠಶಾಲಾ ಕಾರ್ಯಕ್ರಮದಲ್ಲಿ ಈ ಶಾಲೆಯನ್ನು ಆರಂಭಿಸಿದ ವರ್ಷ ಅದು. ಗುತ್ತಿಗೆ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ ಅವರಿಗೆ ನೇಮಕಾತಿ ಖಾಯಂ ಆದದ್ದು 2008ರಲ್ಲಿ. ಇಬ್ಬರು ಶಿಕ್ಷಕರೂ ಹಳ್ಳಿಯಿಂದ ಕೆಲವೇ ಕಿ.ಮೀ ದೂರದಲ್ಲಿ ನೆಲೆಸಿದ್ದಾರೆ. ವಿನಯಶೀಲರೂ ಸಂತೃಪ್ತರೂ ಆದ ಕೈಲಾಶ್ ಹೇಳುತ್ತಾರೆ, "ಸರ್ಕಾರ ನನಗೆ ಒಳ್ಳೆಯ ಉದ್ಯೋಗ ನೀಡಿದೆ, ಆದ್ದರಿಂದಲೇ ನಾನು

ಪ್ರತಿದಿನ ಅತ್ಯುತ್ತಮವಾಗಿ ಕೆಲಸವನ್ನು ನಿರ್ವಹಿಸಬೇಕು." ಇವರಿಬ್ಬರಲ್ಲಿ ಅಶೋಕ್ ನಾಯಕರು. ಕೈಲಾಶ್‌ರಿಗೆ ಅವರನ್ನು ಬೆಂಬಲಿಸುವುದರಲ್ಲಿ ಸಂತೋಷವಿದೆ. ಅಶೋಕ್ ಮಾತು– ಕೃತಿಗಳಲ್ಲಿ ಆತ್ಮವಿಶ್ವಾಸವಿರುವ ಮನುಷ್ಯ. ತಮ್ಮ ಮಕ್ಕಳ ಕುರಿತಾದ ಪ್ರೀತಿ, ಶಾಲೆಯ ಕುರಿತಾದ ಹೆಮ್ಮೆ ಅವರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅವರ ಕೆಲವೊಂದು ಹೇಳಿಕೆಗಳನ್ನು ಬಿಡಿಯಾಗಿ ತೆಗೆದುಕೊಂಡರೆ ಅವರು ಜಂಬದ ಮನುಷ್ಯ ಎಂಬ ಭಾವನೆ ಬರಬಹುದು;. ಆದರೆ ಹಾಗಿಲ್ಲದೆಯೂ ಇರಬಹುದು. ಅವರು ಗಣಿತದ ಕಾರ್ಯಾಗಾರಗಳನ್ನು ಹಾಗೂ ತಾವು ಹಾಜರಿದ್ದ ಎಸ್‌ಎಲ್‌ಡಿಪಿಗಳನ್ನು, ಅದರಲ್ಲಿ ತಮಗೆ ದೊರೆತ ಸಲಹೆ ಸೂಚನೆಗಳನ್ನು ಮೌಲ್ಯಯುತವೆಂದು ಸ್ವೀಕರಿಸುತ್ತಾರೆ. ತಮ್ಮ ಐದನೆಯ ತರಗತಿಯ ಮಕ್ಕಳು ನವೋದಯ ಶಾಲೆಯ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಂಡು ಹಾಜರಾಗಬೇಕೆಂಬುದು ಅವರ ಆಸೆ. ಆದರೆ ಪರೀಕ್ಷೆಗೆ ತಯಾರು ಮಾಡುವುದಕ್ಕಿಂತ ಆಚೆಗೆ ಅವರು ಹೆಚ್ಚಿನ ಮುತುವರ್ಜಿಯನ್ನು ತೆಗೆದುಕೊಳ್ಳುತ್ತಿಲ್ಲ. ಅದಕ್ಕೆ ಕಾರಣವನ್ನು ಅವರು ಬಿಚ್ಚು ಮನಸ್ಸಿನಿಂದ ಹೇಳುತ್ತಾರೆ. "ತಮ್ಮ ಮಕ್ಕಳನ್ನು ಪರೀಕ್ಷೆ ಬರೆಯಲು ಪಟ್ಟಣಕ್ಕೆ ಕರೆದುಕೊಂಡು ಹೋಗಲು ಪೋಷಕರು ತಯಾರಿಲ್ಲ. ನಾನು ಅವರಿಗೆ ಅವಶ್ಯ ಪುಸ್ತಕಗಳನ್ನು, ಸಾದಿಲ್ವಾರನ್ನು ಕೊಂಡುಕೊಡಲು ಸಿದ್ಧನಿದ್ದೇನೆ. ಆದರೆ ಪಟ್ಟಣಕ್ಕೆ ಕರೆದೊಯ್ದು ಬರುವ ಜವಾಬ್ದಾರಿಯನ್ನು ಹೊರಲು ನನಗೆ ಸಾಧ್ಯವಾಗದು. ದಾರಿಯಲ್ಲೇನಾದರೂ ಅವಘಡವಾದರೆ ಏನು ಗತಿ, ಜವಾಬ್ದಾರಿ ನನ್ನ ತಲೆಗೆ ಬರುತ್ತದೆ. ಆಗ ದೇವರೇ ಗತಿ."

ಇಲ್ಲಿನ ಜನಸಮುದಾಯದಲ್ಲಿ ಭಿಲ್ಲರು (ಪರಿಶಿಷ್ಟ ಬುಡಕಟ್ಟು) ಮತ್ತು ನಾಥರು (ಹಿಂದುಳಿದ ವರ್ಗ) ಸಮಾನ ಪ್ರಮಾಣದಲ್ಲಿದ್ದಾರೆ. ಬಹುತೇಕ ಪೋಷಕರು ಅನಕ್ಷರಸ್ಥರು. ಕೇವಲ ನಾಲ್ಕೈದು ಕುಟುಂಬಕ್ಕೆ ಮಾತ್ರ ಸ್ವಂತ ಉಳಲು ಆಗುವಷ್ಟು ಭೂಮಿ ಇದೆ. ಉಳಿದವರಿಗೆ ಇರುವ ಭೂಮಿ ಬಲು ಅಲ್ಪ; ಅವರು ಕೃಷಿ ಕಾರ್ಮಿಕರಾಗಿಯೇ ಬದುಕು ಕಟ್ಟಿಕೊಳ್ಳಬೇಕು. "ಅದೇನೇ ಇದ್ದರೂ ಅವರಿಗೆಲ್ಲಾ ಸ್ವಂತ ಎಮ್ಮೆಗಳಿದ್ದು, ಮನೆಗೆ ಬೇಕಾಗುವಷ್ಟು ಹಾಲಂತೂ ದೊರಕುತ್ತದೆ" ಎಂದು ಕೈಲಾಶ್ ಹೇಳಿದರು. ಅವಶ್ಯಕತೆ ಇದ್ದಾಗ ಈ ಸಮುದಾಯ ತಮ್ಮದೇ ಸಣ್ಣ ನಿಧಿಯನ್ನು ಕೂಡಿಸಿ ಕೊಡುತ್ತಾರೆ. ಅವರಿಗೆ ತಮ್ಮ ಶಾಲೆ ಚೆನ್ನಾಗಿದೆ, ಕೈಲಾಶ್ ಮತ್ತು ಅಶೋಕ್ ತಮ್ಮ ಕೈಲಾದದ್ದನ್ನೆಲ್ಲಾ ಮಾಡುತ್ತಿದ್ದಾರೆ ಎಂಬ ಅರಿವಿದೆ. ಹತ್ತಿರದಲ್ಲೇ ಒಂದು ಖಾಸಗಿ ಶಾಲೆಯಿದೆ. ಅಶೋಕ್ ಕೊಂಚ ಎದೆಯುಬ್ಬಿಸಿ ಹೇಳುತ್ತಾರೆ. "ಕೊಯಿ ನಹೀಂ ಜಾಯೇಂಗೆ ವಹಾಂ, ಕ್ಯೋ ಜಾಯೇಂಗೆ?" (ಅಲ್ಲಿಗೆ ಯಾರೂ ಹೋಗುವುದಿಲ್ಲ, ಏಕೆ ಹೋದಾರು?) ಪೋಷಕರಿಗೆ ತಮ್ಮ ಮಕ್ಕಳು ಇಲ್ಲಿ ಚೆನ್ನಾಗಿ ಕಲಿಯುತ್ತಿದ್ದಾರೆ ಎಂಬುದು ತಿಳಿದಿದೆ.

ಸಂಜೆ ಐದು ಘಂಟೆಯಾದರೂ ಹುಡುಗರು ಇನ್ನೂ ಅಲ್ಲೇ ಇದ್ದರು. ಗೇಟಿನಿಂದಾಚೆ ಮೂರು ಜನ ಮಹಿಳೆಯರು ಬಣ್ಣಬಣ್ಣದ ಬಟ್ಟೆಗಳನ್ನು ಧರಿಸಿ, ಮುಖದ ತುಂಬಾ ಸೆರಗು ಹೊದ್ದು ನಿಂತಿದ್ದರು. ಅವರಲ್ಲಿ ಒಬ್ಬಾಕೆ ಎರಡು ದೊಡ್ಡ ಸ್ಟೀಲ್ ಬಿಂದಿಗೆಗಳನ್ನು (ಭಾರತದ ಅನೇಕ ಕಡೆ ಅವುಗಳನ್ನು ಅಂಡಾ ಎನ್ನುತ್ತಾರೆ) ಎರಡೂ ಕೈ ಬಿಟ್ಟು

ಸುಂದರವಾಗಿ ತಲೆಯ ಮೇಲೆ ಸಮತೋಲನದಿಂದ ಇರಿಸಿಕೊಂಡಿದ್ದರು. ಈ ಮಹಿಳೆಯರಲ್ಲಿ ಇಬ್ಬರು ಎಸ್‌ಡಿಎಮ್‌ಸಿ ಸದಸ್ಯೆಯರೆಂದೂ, ಒಬ್ಬಾಕೆ ಅಧ್ಯಕ್ಷರೆಂದೂ ಶಿಕ್ಷಕರು ನಮಗೆ ತಿಳಿಸಿದರು. ಶಿಕ್ಷಕರು, ಹೆಣ್ಣುಮಕ್ಕಳು ಹಾಗೂ ವಿದ್ಯಾರ್ಥಿಗಳೊಂದಿಗೆ ನಾವು ನೆನಪಿಗೆಂದು ಒಂದು ಫೋಟೋ ತೆಗೆಸಿಕೊಂಡೆವು. ಮಧ್ಯದಲ್ಲಿ ನಮ್ಮ ಗಮನ ಸೆಳೆಯಲಿಕ್ಕೆ ಎಂಬಂತೆ ಅಡ್ಡಬರುತ್ತಿದ್ದ ಎಮ್ಮೆಗಳಿಂದಾಗಿ ನಾವು ಹಲವಾರು ಚಿತ್ರಗಳನ್ನೇ ತೆಗೆಸಿಕೊಳ್ಳಬೇಕಾಯಿತು.